ಆ) ಪ್ರಮುಖ ಪದವಿ ಕಾಲೇಜಿನ ಖಾಲಿ ಹುದ್ದೆಗೆ ರಾಜ್ಯ ಮಟ್ಟದ ನೇಮಕಾತಿ ಸಮಿತಿಯಿಂದ ಆಯ್ಕೆ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದು. ಪ್ರೌಢಶಾಲಾ ವಿಭಾಗದಲ್ಲಿ ಖಾಲಿ ಇರುವ ಸಹಾಯಕ ಶಿಕ್ಷಕರ ಹುದ್ದೆ ಮತ್ತು ದೈಹಿಕ ಶಿಕ್ಷಕ-ಶ್ರೇಣಿ-೧ ಹುದ್ದೆಗಳಿಗೆ ವಿಭಾಗ ಮಟ್ಟದ ನೇಮಕಾತಿ ಸಮಿತಿ ಮೂಲಕ ತುಂಬಲು ಕ್ರಮ ಕೈಗೊಳ್ಳಲಾಗುತ್ತಿದೆ.

ಶ್ರೀ ಬಿ. ಎಂ. ಇದಿನಬ್ಬ.- ೯೨೩ (೨೫೧೭) (ಶ್ರೀ ರಾಮಪ್ಪ ರೈ ಅವರ ಪರವಾಗಿ).—ಮಾನ್ಯ ಅಧ್ಯಕ್ಷರೇ, ವಾಮನ ಪದವಿನಲ್ಲಿ ೫, ಮಣಿಲೂರಿನಲ್ಲಿ ೫, ಮತ್ತು ನೋಣಾಲ್‌ನಲ್ಲಿ ೨ ಹೀಗೆ ೧೨ ಸ್ಥಾನಗಳು ಖಾಲಿ ಉಂಟು ಎಂದು ಹೇಳಿದ್ದಾರೆ. ನೇಮಕಾತಿ ಸಮಿತಿಯಿಂದ ಈ ಹುದ್ದೆಗಳನ್ನು ತುಂಬಲು ಕ್ರಮ ಕೈಗೊಳ್ಳುತ್ತೇವೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಆದಷ್ಟು ಜಾಗ್ರತೆ ಈ ಹುದ್ದೆಗಳನ್ನು ಭರ್ತಿ ಮಾಡಲಿಕ್ಕೆ ಕ್ರಮ ತೆಗೆದುಕೊಳ್ಳುತ್ತಾರೆಯೇ ಎಂಬುದನ್ನು ಹೇಳಬೇಕು.

ಶ್ರೀ ಬಿ. ಸೋಮಶೇಖರ್.—ಆದಷ್ಟು ಬೇಗ ಮಾಡುತ್ತೇವೆ.

ಶ್ರೀ ಬಿ. ಎಂ. ಇದಿನಬ್ಬ.—ಸಾಧಾರಣ ಎಷ್ಟು ಸಮಯ ಆಗುತ್ತದೆ ?

ಶ್ರೀ ಬಿ. ಸೋಮಶೇಖರ್.—ಆದಷ್ಟು ಬೇಗ.

ಮುಧೋಳ್ ತಾಲೂಕಿನಲ್ಲಿ ಮಿರಚಿ ಮಲ್ಲಾಪುರ ಸೇತುವೆ

೯೨೫ (೨೫೧೩) ಶ್ರೀ ಬಿ. ಜಿ. ಜಮಖಂಡಿ (ಮುಧೋಳ್).—ಮಾನ್ಯ ನಗರಾಭಿವೃದ್ಧಿ ಹಾಗೂ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.—

ಅ) ಮುಧೋಳ್ ತಾಲೂಕು ಮಿರಚಿ-ಮಲ್ಲಾಪುರ ಸೇತುವೆ ಯಾವಾಗ ಮಂಜೂರಾಯಿತು,

ಆ) ಹಾಗಿದ್ದಲ್ಲಿ ಅದರ ಅಂದಾಜು ವೆಚ್ಚವೆಷ್ಟು, ?

ಇ) ಸದರಿ ಸೇತುವೆ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಮತ್ತು ಲೋಕೋಪಯೋಗಿ ಸಚಿವರು) ಅ ಮತ್ತು ಆ ಸರ್ಕಾರಿ ಆದೇಶ ಸಂ.ಪಿಡಬ್ಲ್ಯೂಡಿ ೨೯೪ ಸಿಬಿಆರ್‌೮೬, ಬೆಂಗಳೂರು ದಿನಾಂಕ ೨೯-೧೨-೧೯೮೬ ರಂದು ಸದರೀ ಕೆಲಸಕ್ಕೆ ಸರ್ಕಾರದಿಂದ ರೂ.೮.೦೦ ಲಕ್ಷಗಳಿಗೆ ಆಡಳಿತಾತ್ಮಕ ಮಂಜೂರಾತಿ ದೊರೆತಿದೆ. ತಾಂತ್ರಿಕ ಮಂಜೂರಾತಿಯನ್ನು ರೂ.೮.೭೦ ಲಕ್ಷಗಳಿಗೆ ಮುಖ್ಯ ಇಂಜಿನಿಯರ್ ರವರು ೧೭-೩-೮೭ರಲ್ಲಿ ನೀಡಿದ್ದಾರೆ.

ಇ) ಸದರೀ ಕೆಲಸಕ್ಕೆ ಟೆಂಡರುಗಳನ್ನು ಕರೆಯಲಾಗಿದ್ದು ಶೀಘ್ರದಲ್ಲೇ ಕೆಲಸ ಪ್ರಾರಂಭಿಸಲಾಗುವುದು ೯೨೪ (೧೯೨೧) ಸದಸ್ಯರು ಹಾಜರಿರಲಿಲ್ಲ.

ಶ್ರೀ ಬಿ. ಜಿ. ಜಮಖಂಡಿ.—ಮಾನ್ಯ ಅಧ್ಯಕ್ಷರೆ, ಈ ಮಲ್ಲಾಪುರ ಎಂಬ ಹಳ್ಳಿ ನನ್ನ ತಾಲ್ಲೂಕಿನ ಕಟ್ಟ ಕಡೆಯ ಹಳ್ಳಿ. ಅದಕ್ಕೆ ಸಂಪರ್ಕ ಆಗಬೇಕಾದರೆ ಈ ನಾಲೆಗೆ ಸೇತುವೆ ಕಟ್ಟುವುದು ಅಪಶ್ಯ. ಕಳೆದ ವರ್ಷ ಲೋಕೋಪಯೋಗಿ ಮಂತ್ರಿಗಳು ಬಂದಾಗ ನಿವೇದನೆ ಮಾಡಿದಾಗ ಅವರು ಅಡಿಗಲ್ಲು ಹಾಕಿದರು ಈ ಹಳ್ಳಿಯಿಂದ ಮುಂಡಲ ಪಂಚಾಯಿತಿ ಇರುವ ಸ್ಥಳಕ್ಕೆ ಮತ್ತು ತಾಲ್ಲೂಕಿನ ಸ್ಥಳವಾದ ಮುಧೋಳಕ್ಕೆ ವ್ಯಾಪಾರ ಕೇಂದ್ರಕ್ಕೆ ಮಾಲೀಕರು ಬರಬೇಕಾದರೆ ಈ ಹಳ್ಳವನ್ನು ದಾಟಬೇಕು. ನನ್ನ ತಾಲ್ಲೂಕಿನ ಯಾವುದೇ ಹಳ್ಳಿಗಳಿಗೆ ಸಂಪರ್ಕ ಇಲ್ಲ. ಈಗಾಗಲೇ ಟೆಂಡರ್ ಕರೆದರೂ ಟೆಂಡರ್ ಹಾಕಲು ಜನ ಮುಂದೆ ಬರುತ್ತಿಲ್ಲ. ಟೆಂಡರ್ ಹಾಕದೇ ಇರುವ ಈ ಪರಿಸ್ಥಿತಿಯಲ್ಲಿ ಸರ್ಕಾರ ಇಲಾಖೆಯು ಮುಖಾಂತರವಾದರೂ ಸೇತುವೆ ಕಟ್ಟಿಸಿದರೆ ಅನುಕೂಲವಾಗುತ್ತದೆ. ಒಂದು ವೇಳೆ ನಿಯಮಾವಳಿಗೆ ವಿರೋಧವಾದರೂ ಸೇತುವೆ ಅವಶ್ಯ ಇರುವುದರಿಂದ ಗ್ರಾಮಾಂತರ ರೈತರಿಗೆ, ವ್ಯಾಪಾರಗಾರರಿಗೆ ಮತ್ತು ವಿದ್ಯಾರ್ಥಿಗಳಿಗೆ ಕಷ್ಟವಾಗಿರುವುದರಿಂದ ಸೇತುವೆ ಮಾಡುವ ಸಲುವಾಗಿ ಡಿಪಾರ್ಟ್‌ಮೆಂಟಿನಿಂದ ಮಂಜೂರು ಮಾಡಿಕೊಡಬೇಕೆಂದು ತಮ್ಮ ಮುಖಾಂತರ ಸಚಿವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಚಂದ್ರಶೇಖರ್ —ಮಾನ್ಯ ಅಧ್ಯಕ್ಷರೆ, ಈ ಕೆಲಸಗಳನ್ನು ಜಿಲ್ಲಾಪರಿಷತ್ತುಗಳಿಗೆ ವರ್ಗಾವಣೆ ಮಾಡಿದ್ದೇವೆ. ಅದರ ಬಗ್ಗೆ ಅವರು ಎಲ್ಲಾ ಕ್ರಮಗಳನ್ನು ತೆಗೆದುಕೊಂಡು ಟೆಂಡರ್‌ಗಳನ್ನು

ಕರೆದಿದ್ದಾರೆ. ಟೆಂಡರ್‌ಗಳಿಗೆ ದಿನಾಂಕ ೨೭-೬-೮೮ನೇ ಕೋನೇ ದಿವಸವನ್ನು ಇಡಲಾಗಿದೆ. ಆ ದಿವಸ ಟೆಂಡರ್‌ಗಳನ್ನು ಓಪನ್ ಮಾಡುವುದು ಇದೆ. ತದ ನಂತರ, ಯಾವುದೇ ಟೆಂಡರ್ ಸರಿಯಾಗಿ ಬರಲಿಲ್ಲವೆಂದರೆ, ಮುಂದಿನ ಕ್ರಮವನ್ನು ಜಲ್ಲಾಪರಿಷತ್ತಿನವರು ತೆಗೆದುಕೊಳ್ಳುತ್ತಾರೆ. ಇದರ ಬಗ್ಗೆ ಏನಾದರು ನಮ್ಮ ಇಲಾಖೆ ಗಮನಕ್ಕೆ ಬಂದರೆ ಪರಿಶೀಲನೆ ಮಾಡುತ್ತೇವೆ.

ಅಧ್ಯಕ್ಷರು.—ಶ್ರೀ ಶರಣಬಸಪ್ಪ ಮಾಲಿ ಪಾಟೀಲ್, ಆಬ್ಸೆಂಟ್.
ಈಗ ಶ್ರೀ ಕೆ. ಬಿ. ಶಾಣಪ್ಪನವರ ಪರವಾಗಿ ಪಂಪಾಪತಿಯವರು ಪ್ರಶ್ನೆ ಕೇಳಬಹುದು.

ಶಹಾಬಾದ್ ಕ್ಷೇತ್ರದಲ್ಲಿರುವ ಮಾಧ್ಯಮಿಕ ಶಾಲೆಗಳನ್ನು ಪ್ರೌಢಶಾಲೆಗಳನ್ನಾಗಿ ಪರಿವರ್ತನೆ

೯೨೭ (೨೧೧೭) ಶ್ರೀ ಕೆ. ಬಿ. ಶಾಣಪ್ಪ (ಶಹಾಬಾದ್).—ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ) ಗುಲ್ಬರ್ಗಾ ಜಿಲ್ಲೆಯಲ್ಲಿ ಸರ್ಕಾರಿ ಪ್ರೌಢಶಾಲೆಗಳ ಸಂಖ್ಯೆ ಎಷ್ಟು ಮತ್ತು ಅವುಗಳಲ್ಲಿ ಹೊಂದಿಕೊಂಡಿರುವ ಕಿರಿಯ ಕಾಲೇಜುಗಳು ಎಷ್ಟು ?

ಆ) ಶಹಾಬಾದ್ ಮತಕ್ಷೇತ್ರದಲ್ಲಿ ಇರುವ ಸರ್ಕಾರಿ ಪ್ರೌಢ ಶಾಲೆಗಳ ಸಂಖ್ಯೆ ಎಷ್ಟು ? ಮತ್ತು ಯಾವ ಯಾವ ಶಾಲೆಗಳಿಂ ತಪ್ಪಿದೆ ಆದ ಶಾಲಾ ಕಟ್ಟಡಗಳನ್ನು ಪಡೆದಿವೆ ?

ಇ) ಕಿರಣಗಿ, ಹಾಗರ, ಗುಂಡಗಿ ಇವು ಅತಿ ದೊಡ್ಡ ಗ್ರಾಮಗಳೇ ಅಲ್ಲಿದ್ದ ಮಾಧ್ಯಮಿಕ ಶಾಲೆಗಳನ್ನು ಪ್ರೌಢ ಶಾಲೆಗಳನ್ನಾಗಿ ಮಾಡಬೇಕೆಂದು ಒತ್ತಾಯ ಬಂದಿದ್ದು ನಿಜವೆ ? ಹಾಗಿದ್ದಲ್ಲಿ ಸರ್ಕಾರ ಈ ಬೇಡಿಕೆಯನ್ನು ಯಾವಾಗ ಈಡೇರಿಸಿ ಕೊಡುವುದು ?

ಶ್ರೀ ಬಿ. ಸೋಮಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಮಂತ್ರಿಗಳು).—

ಅ) ಸರ್ಕಾರಿ ಪ್ರೌಢ ಶಾಲೆಗಳು — ೧೨೪

ಇವುಗಳಲ್ಲಿ ಸಂಯುಕ್ತ ಕಿರಿಯ ಕಾಲೇಜ್‌ನಲ್ಲಿ ಹೊಂದಿಕೊಂಡ ಶಾಲೆಗಳು— ೩೪

ಆ) ೮ ಸರ್ಕಾರಿ ಪ್ರೌಢ ಶಾಲೆಗಳು. ಈ ಕೆಳಕಂಡ ಶಾಲೆಗಳು ಕಟ್ಟಡವನ್ನು ಪಡೆದಿವೆ
೧) ಫರದಾಬಾದ್ (೨) ಶಹಾಬಾದ್ (೩) ಬಂಕೂರು (೪) ವಾಡಿ.

ಇ) ಹೌದು.

ಈ) ಗುಲ್ಬರ್ಗಾ ಜಿಲ್ಲಾ ಪರಿಷತ್ ಈ ಬೇಡಿಕೆಯನ್ನು ಇತ್ಯರ್ಥಪಡಿಸಬೇಕಾಗಿದೆ.
(ಮಾನ್ಯ ಸದಸ್ಯರಾದ ಶ್ರೀ ಕೆ. ಬಿ. ಶಾಣಪ್ಪನವರ ಪರವಾಗಿ ಶ್ರೀ ಪಂಪಾಪತಿಯವರು ಕೇಳಿದರು)

ಶ್ರೀ ಪಂಪಾಪತಿ.—ಅಧ್ಯಕ್ಷರೇ, ಕಿರಣಗಿ, ಹಾಗರ, ಗುಂಡಗಿ, ಇವು ಸ್ವಲ್ಪ ದೊಡ್ಡ ಜನ ಸಂಖ್ಯೆ ಇರತಕ್ಕಂಥ ಗ್ರಾಮಗಳು. ಇಲ್ಲಿ ಪ್ರೌಢ ಶಾಲೆಗಳನ್ನು ಪ್ರಾರಂಭ ಮಾಡುವುದು ಅಗತ್ಯ ಇದೆ. ತಾವು ಜಿಲ್ಲಾಪರಿಷತ್ತಿನವರನ್ನು ಇದರ ಬಗ್ಗೆ ಕೇಳಬೇಕೆಂದು ಹೇಳಿದ್ದೀರಿ. ಜಿಲ್ಲಾಪರಿಷತ್ತಿನವರು ತಾತ್ಕಾಲಿಕವಾಗಿ ಮಾಡುವುದು ಸಾಧ್ಯ. ಆದ್ದರಿಂದ ಸರ್ಕಾರವೇ ಇದರ ಬಗ್ಗೆ ಪರಿಶೀಲನೆ ಮಾಡಿ ಪ್ರೌಢ ಶಾಲೆಗಳನ್ನು ಪ್ರಾರಂಭ ಮಾಡುವುದಕ್ಕೆ ಅನುಮತಿಯನ್ನು ಕೊಡುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಬಿ. ಸೋಮಶೇಖರ್.—ಶೈಕ್ಷಣಿಕ ಆಧಾರವ ಮೇಲೆ ಪ್ರೌಢ ಶಾಲೆಗಳನ್ನು ಕೊಡತಕ್ಕಂಥ ಕಾರ್ಯಕ್ರಮ ಇದೆ. ಮಾನ್ಯ ಸದಸ್ಯರು ಹೇಳಿರತಕ್ಕ ಗ್ರಾಮಗಳಲ್ಲಿ ಶೈಕ್ಷಣಿಕ ಆಧಾರವ ಮೇಲೆ ಪ್ರೌಢ ಶಾಲೆಗಳನ್ನು ತೆರೆಯಬೇಕೆಂದು ಅವಶ್ಯ ಕಂಡು ಬಂದರೆ ಜಿಲ್ಲಾಪರಿಷತ್ತಿನವರಿಗೆ ಸೂಚನೆ ಕೊಟ್ಟು ಪ್ರೌಢ ಶಾಲೆಗಳನ್ನು ಮಂಜೂರು ಮಾಡುವ ಬಗ್ಗೆ ಪರಿಗಣಿಸಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು.—ಶ್ರೀ ಭೂಪತಿಯವರು. ಆಬ್ಸೆಂಟ್ ಅವರ ಪರವಾಗಿ ಪಂಪಾಪತಿಯವರು ಪ್ರಶ್ನೆ ಕೇಳಬಹುದು.